# Karnataka Folklore University

**Gotagodi, Shiggaon Taluk, Haveri District-581205**

# Fifth Annual Convocation 2021

**on Tuesday**

**9th March, 2021**



ಕನ್ನಡಪ್ರಭ
ಬುಧವಾರ 10.3.2021
ಹಾವೇರಿ 03

ಜಾನಪದ ಕೇವಲ ಮೌಖಿಕ ಪರಂಪರೆ ಮಾತ್ರವಲ್ಲ, ಕೇವಲ ಹಳ್ಳಿಗೆ ಸೀಮಿತವಾಗಿಲ್ಲ, ಜಾನಪದ ವಿಶ್ವ ವ್ಯಾಪಿಯಾಗಿದೆ. ಅದು ನಗರೀಕರ ಣವನ್ನು, ತಂತ್ರಜ್ಞಾನವನ್ನು ಒಳಗೊಂಡಿದೆ. ಅಲಿಖಿತ ಪರಂಪರೆ ಮಾತ್ರವಲ್ಲ ಲಿಖಿತ ಪರಂಪರೆ ಯೂ ಒಳಗೊಂಡಿದೆ.
• ಡಾ. ಆರ್. ಬಾಲಸುಬ್ರಮಣ್ಯ
ಸ್ವಾಮಿ ವಿವೇಕಾಂದ ಯೂಥ್ ಮೂಮೆಂಟ್ ಸಂಸ್ಥಾಪಕ

5ನೇ ಘಟಿಕೋತ್ಸವ ಉದ್ದೇಶಿಸಿ ಮಾತನಾಡಿದ ಡಾ. ಆರ್. ಬಾಲಸುಬ್ರಮಣ್ಯಂ | ಜಾನಪದ ಕಲೆಗಳ ಅನಾವರಣ

## ಜಾವಿವಿ ಬೆಳವಣಿಗೆಗೆ ಸರ್ಕಾರ ಆದ್ಯತೆ ನೀಡಲಿ

ಚಿಕ್ಕಮಗಳೂರ ಜಿಲ್ಲೆಯ ತರೀಕೆರೆ ತಾಲೂಕಿನ ಮಾಳೇನಹಳ್ಳಿಯ ಗ್ರಾಮದ ವೀರಗಾಸೆ ಕಲಾವಿದ ಎಂ.ಆರ್. ಬಸಪ್ಪ ಅವರಿಗೆ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಲಾಯಿತು.

ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ ಹುಸೇನ್‌ಸಾಬ್ ಅವರಿಗೆ ಚಿನ್ನದ ಪದಕ ಪ್ರದಾನ ಮಾಡಿದರು.

• **ಕನ್ನಡಪ್ರಭ ವಾರ್ತೆ** ಹಾವೇರಿ

ಜಾನಪದ ವಿಶ್ವವಿದ್ಯಾಲಯವು ಇತರೇ ವಿಶ್ವವಿದ್ಯಾಲಯಗಳಿಂತ ಭಿನ್ನವಾದದ್ದು. ನಮ್ಮ ಸಂಸ್ಕೃತಿ, ಪರಂಪರೆಯ ಮೂಲಧಾತುವಾಗಿರುವ ಈ ನೆಲದ ಕೋಟ್ಯಂತರ ಜನರ ಬೆವರಿನ ಸಂಸ್ಕೃತಿಯ ಪ್ರತಿನಿಧಿಯಾಗಿರುವ ಜಾನಪದ ವಿಶ್ವವಿದ್ಯಾನಿಲಯದ ಬೆಳ...

...ವಿಚಾರಧಾರೆಯನ್ನು ದಾಟಿ ಸೈದ್ಧಾಂತಿಕವಾಗಿ ಬೆಳೆಯಬೇಕಾಗಿದೆ. ಇಂತಹ ವಿಷಯಗಳ ಬಗ್ಗೆ ಜಾನಪದ ವಿಶ್ವವಿದ್ಯಾಲಯ ಗಮನಹರಿಸಬೇಕು. ಸಂಶೋಧನೆಗೆ ಆದ್ಯತೆ ನೀಡಬೇಕು. ಜನಪದ ಪ್ರದರ್ಶನ ಕಲೆಗಳನ್ನು ಸಮಕಾಲೀನಗೊಳಿಸಬೇಕು. ಜಾನಪದ ಅಧ್ಯಯನಕ್ಕಾಗಿ ತೆರೆಯಲಾದ...

### ಸಣ್ ಸುದ್ದಿ

### ಬಂಗಾರದ ಹುಡುಗನಾದ ಕೂಲಿಯ ಮಗ

**ಹಾವೇರಿ:** ಆಂಧ್ರದಿಂದ ಕೂಲಿ ಹುಡುಕಿಕೊಂಡು ಬೆಂಗಳೂರಿಗೆ ಗುಳೆ ಬಂದ ಬಡ ಕೂಲಿ ಕುಟುಂಬದ, ತೆಲುಗು ಮಾತೃಭಾಷೆಯ ಹುಡುಗ ಜಾನಪದ ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ ಎರಡು ಚಿನ್ನದ ಪದಕಕ್ಕೆ ಕೊರಳೊಡ್ಡಿದ್ದಾನೆ. ಶಿಗ್ಗಾಂವಿ ತಾಲೂಕಿನ ಗೊಡಗೋಡಿ ಕರ್ನಾಟಕ ಜಾನಪದ ವಿಶ್ವವಿದ್ಯಾಲಯದಲ್ಲಿ ಮಂಗಳವಾರ ಆಯೋಜಿಸಿದ್ದ 5ನೇ ಘಟಿಕೋತ್ಸವದಲ್ಲಿ...

### ಗಮನಸೆಳೆದ ವಿದ್ಯಾರ್ಥಿಗಳು

ಸಾಂಪ್ರದಾಯಿಕ ಉಡುಗೆ ತೊಟ್ಟು ವಿದ್ಯಾರ್ಥಿಗಳು ಗಮನಸೆಳೆ ದರು. ವಿದ್ಯಾರ್ಥಿನಿಯರು ಬಂಗಾರದ ಅಂಚಿನ ಬಿಳಿಸೆರೆ ರವಿಕೆ ತೊಟ್ಟರೆ ವಿದ್ಯಾರ್ಥಿಗಳು ...

... ರುಮಾಲು ಸುತ್ತಿಕೊಂಡು ಘಟಿಕೋತ್ಸವದಲ್ಲಿ ಭಾಗವಹಿಸಿ ಸಾಂಪ್ರದಾಯಕ ಮೆರಗು ತಂದರು. ಅಲಂಕೃತ ಮಣ್ಣಿನ ಮಡಿಕೆ, ಚಾಮರಗಳು, ವೇದಿಕೆಗೆ ರಂಗು ತಂದರೆ ವೇದಿಕೆ ಮೇಲೆ ಮಣ್ಣಿನ ಮಡಿಕೆ ಹಾಗೂ ಲೋಟದಲ್ಲಿ ಗಣ್ಯರಿಗೆ ಕುಡಿಯಲು ನೀರು ತುಂಬಿಸಿಟ್ಟು ಗಮನ ಸೆಳೆಯಿತು.

## ವೀರಗಾಸೆ ಕಲಾವಿದ ಬಸಪ್ಪಗೆ ಗೌಡಾ ಪ್ರದಾನ

**ಹಾವೇರಿ:** ಜಿಲ್ಲೆಯ ಶಿಗ್ಗಾಂವಿ ತಾಲೂಕಿನ ಗೊಟಗೋಡಿಯಲ್ಲಿರುವ ಕರ್ನಾಟಕ ಜಾನಪದ ವಿಶ್ವವಿದ್ಯಾಲಯದ 5ನೇ ಘಟಿಕೋತ್ಸವದಲ್ಲಿ ಚಿಕ್ಕಮಗಳೂರ ಜಿಲ್ಲೆಯ ತರೀಕೆರೆ ತಾಲೂಕಿನ ಮಾಳೇನಹಳ್ಳಿಯ ಗ್ರಾಮದ ವೀರಗಾಸೆ ಕಲಾವಿದ ಎಂ.ಆರ್. ಬಸಪ್ಪ ಅವರಿಗೆ ಗೌರವ ಡಾಕ್ಟರೇಟ್ ಪದವಿ ಪ್ರದಾನ ಮಾಡಲಾಯಿತು.

ಕರ್ನಾಟಕ ಜಾನಪದ ಅಕಾಡೆಮಿ ಸೇರಿದಂತೆ ವಿವಿಧ ಅಕಾಡೆಮಿ ಪ್ರಶಸ್ತಿ ಪುರಸ್ಕೃತರಾದ ಬಸಪ್ಪ ಅವರಿಗೆ ಗೌಡಾ, 19 ಪಿಎಚ್‌ಡಿ, ಎಂ.ಎ. ಸೇರಿದಂತೆ ವಿವಿಧ ಪದವಿ ಹಾಗೂ ಡಿಪ್ಲೊಮಾ ಪದವಿ ಪ್ರದಾನ ಮಾಡಲಾಯಿತು.

ಘಟಿಕೋತ್ಸವದಲ್ಲಿ 2018-19ನೇ ಸಾಲಿನ ಜಾನಪದ ಸಾಹಿತ್ಯದ ಸ್ನಾತಕೋತ್ತರ ಪದವಿಯಲ್ಲಿ ...

... ದ್ಯಮ ವಿಭಾಗ ಬಸವರಾಜ್, ಲಕ್ಷ್ಮಣ ಆರ್. ಬಂಡಿವಡ್ಡರ, ಜಾನಪದ ಮಾಧ್ಯಮ ಹಾಗೂ ಸಂವಹನ ವಿಭಾಗ ನಾರಾಯಣ ಕರೆವ್ವನವರ, ದೇವರಾಜ ಎಚ್. ಕೋಡಿಹಳ್ಳಿ, ಗ್ರಾಮೀಣ ಮತ್ತು ಬುಡಕಟ್ಟು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ವಿಭಾಗ ಬಸವರಾಜ್ ಛಲಗೇರಿ, ಪವಿತ್ರ ಜಿ. ಬಡಿಗೇರ, ಬಸಮ್ಮ ಗೂಳನವರ, ...

Source: Kannada Prabha, 10/03/2021

# ಜಾನಪದ ವಿವಿ ಕಾರ್ಯ ಸ್ತುತ್ಯರ್ಹ

## ವಿವಿ 5ನೇ ಘಟಿಕೋತ್ಸವದಲ್ಲಿ ಸ್ವಾಮಿ ವಿವೇಕಾಂದ ಯೂಥ್ ಮೂವ್‌ಮೆಂಟ್ ಸಂಸ್ಥಾಪಕ ಡಾ|ಆರ್.ಬಾಲಸುಬ್ರಹ್ಮಣ್ಯಂ ಬಣ್ಣನೆ

**ಬಂಕಾಪುರ:** ಜಾನಪದ ಕೇವಲ ಮೌಖಿಕ ಪರಂಪರೆ ಮಾತ್ರವಲ್ಲ, ಕೇವಲ ಹಳ್ಳಿಗೆ ಸೀಮಿತವಾಗಿಲ್ಲ, ಜಾನಪದ ವಿಶ್ವ ವ್ಯಾಪಿಯಾಗಿದ್ದು, ನಗರೀಕರಣ, ತಂತ್ರಜ್ಞಾನವನ್ನು ಒಳಗೊಂಡಿದೆ. ಅಲಿಖಿತ ಪರಂಪರೆ ಮಾತ್ರವಲ್ಲ ಲಿಖಿತ ಪರಂಪರೆ ಒಳಗೊಂಡಿದೆ ಎಂದು ಸ್ವಾಮಿ ವಿವೇಕಾಂದ ಯೂಥ್ ಮೂವ್‌ಮೆಂಟ್ ಸಂಸ್ಥಾಪಕ ಡಾ|ಆರ್.ಬಾಲಸುಬ್ರಹ್ಮಣ್ಯಂ ಹೇಳಿದರು.

ಜಿಲ್ಲೆಯ ಗೊಟಗೋಡಿಯ ಜಾನಪದ ವಿಶ್ವವಿದ್ಯಾಲಯದ ಬಯಲು ರಂಗಮಂದಿರದಲ್ಲಿ ಮಂಗಳವಾರ ಏರ್ಪಡಿಸಿದ್ದ ಕರ್ನಾಟಕ ಜಾನಪದ ವಿಶ್ವವಿದ್ಯಾನಿಲಯದ ಐದನೇ ಘಟಿಕೋತ್ಸವದಲ್ಲಿ ಘಟಿಕೋತ್ಸವ ಭಾಷಣ ಮಾಡಿದರು.

ಜಾನಪದವೆಂದರೆ ಹಳ್ಳಿಯದು ಮತ್ತು ಹಳೆದು ಮಾತ್ರ ಎಂಬ ರೂಢಿಮೂಲ ವಿಚಾರಧಾರೆಯನ್ನು ದಾಟಿ ಸೈದ್ಧಾಂತಿಕವಾಗಿ ಬೆಳೆಯಬೇಕಾಗಿದೆ. ಇಂತಹ ವಿಷಯಗಳ ಬಗ್ಗೆ ಜಾನಪದ ವಿಶ್ವವಿದ್ಯಾಲಯ ಗಮನಹರಿಸಬೇಕು. ಸಂಶೋಧನೆಗೆ ಆದ್ಯತೆ ನೀಡಬೇಕು. ಜಾನಪದ ಅಧ್ಯಯನಕ್ಕಾಗಿ ತೆರೆಯಲಾದ ಏಷ್ಯಾದಲ್ಲಿಯೇ ಏಕೈಕ ವಿಶ್ವವಿದ್ಯಾನಿಲಯ ಇದಾಗಿದ್ದು, ಭಾರತದ ಎಲ್ಲ ರಾಜ್ಯಗಳ ಹಾಗೂ ವಿಶ್ವದ ವಿದ್ಯಾರ್ಥಿಗಳು ಗೊಟಗೋಡಿಯ ಜಾನಪದ ವಿಶ್ವವಿದ್ಯಾಲಯದಲ್ಲಿ ಕಲಿಕೆಗೆ ಪ್ರವೇಶ ಪಡೆಯುವಂತಾಗಬೇಕು ಎಂದರು.

ಜನಪದ ಜ್ಞಾನ ಜೊತೆಗೆ ಪದವಿಯನ್ನೂ ಸಹ ಜಾನಪದ ವಿವಿ ನೀಡುತ್ತಿದೆ. ಪದವಿ ನಮಗೆ ಕೆಲಸ ಕೊಡುವ ಯಂತ್ರ ಎಂದು ಭಾವಿಸಬೇಡಿ. ಒಂದು ಭಾವನಾತ್ಮಕಸಂಬಂಧದಿಂದಹೋರಹೋಗುತ್ತಿದ್ದಿರಿ. ನಿಮ್ಮ ಜೀವನ ಶೈಲಿ, ಕಲೆ, ಆಲೋಚನೆಗಳನ್ನು ವೃದ್ಧಿಪಡಿಸಿಕೊಂಡು ಒಂದು ಪವಿತ್ರ ಜವಾಬ್ದಾರಿಯನ್ನು ಪಡೆದುಕೊಳ್ಳುತ್ತಿರುವುದರಿಂದ ನಿಮ್ಮ ಭವಿಷ್ಯ ಭವ್ಯವಾಗುತ್ತದೆ ಎಂದು ಪದವಿ ಪಡೆದ ವಿದ್ಯಾರ್ಥಿಗಳಿಗೆ ಹಾರೈಸಿದರು.

ಜಗತ್ತಿನ ಆಧುನಿಕ ಬೆಳವಣಿಗೆಯ ಹೊಸ ಆಯಾಮದ ಹಿನ್ನೆಲೆಯಲ್ಲಿ ಮುಂದಿನ ಐದಾರು ವರ್ಷಗಳಲ್ಲಿ ಜಗತ್ತಿನಲ್ಲಿ ಸ್ಥಾಪಿತವಾದ ಬಹುಪಾಲು ವಿಶ್ವವಿದ್ಯಾಲಯಗಳು ಅಪ್ರಸ್ತುತವಾಗುತ್ತಿವೆ. ಐದುಸಾವಿರ ವಿವಿಗಳ ಪೈಕಿ ಕೇವಲ 50 ವಿವಿಗಳು ಮಾತ್ರ ಉಳಿಯಬಲ್ಲವು ಎಂದು ಹೇಳಲಾಗುತ್ತಿದೆ. ನಮ್ಮ ಬದುಕಿಗೆ ಹತ್ತಿರವಾಗಬಲ್ಲ ಶಿಕ್ಷಣ ಕ್ರಮಗಳು, ವಿಶ್ವವಿದ್ಯಾಲಯಗಳು ಉಳಿಯಬಲ್ಲವು. ಈ ಆಯಾಮದಲ್ಲಿ ನಮ್ಮ ಬದುಕಿನ ನಮ್ಮ ಸಂಸ್ಕೃತಿಗೆ ಹತ್ತಿರವಿರುವ ಜನಪದ ವಿಶ್ವವಿದ್ಯಾಲಯವು ಉಳಿಯಬಲ್ಲದು. ಜಾನಪದ ಅಧ್ಯಯನ ಈ ವಿಶ್ವವಿದ್ಯಾಲಯವನ್ನು ಉಳಿಸಬೇಕು, ಬೆಳೆಸಬೇಕು, ಜಾನಪದ ಎಂದರೆ ಕೇವಲ ಸಂಗೀತ, ನೃತ್ಯ ಎಂದು ನಾವು ಭಾವಿಸಬಾರದು ಎಂದು ಹೇಳಿದರು.

ಕುಲಸಚಿವ ಪ್ರೊ.ಕೆ.ಎನ್.ಗಂಗಾನಾಯಕ ಮಾತನಾಡಿ, ಕರ್ನಾಟಕ ಜಾನಪದ ವಿಶ್ವವಿದ್ಯಾಲಯ 2011ರ ಜುಲೈ 22ರಂದು ಸ್ಥಾಪನೆಗೊಂಡು ಜಾನಪದ ಕ್ಷೇತ್ರದ ಅಧ್ಯಯನ ಮತ್ತು ಬೆಳವಣಿಗೆಗೆ ಮುನ್ನುಡಿ ಬರೆಯಿತು. ಸ್ನಾತಕೋತ್ತರ ಪದವಿ, ಸ್ನಾತಕೋತ್ತರ ಡಿಪ್ಲೊಮಾ, ವಿವಿಧ ಗ್ರಾಮೀಣ ಕಲೆಗಳು, ಮತ್ತು ವೃತ್ತಿಪರತೆಗೆ ಸಂಬಂಧಿಸಿದ ಸರ್ಟಿಫಿಕೇಟ್ ಕೋರ್ಸ್‌ಗಳನ್ನು ಆರಂಭಿಸಿ ಶೈಕ್ಷಣಿಕ ಚಟುವಟಿಕೆಗೆ ಚಾಲನೆ ನೀಡಲಾಗಿದೆ. ಕಳೆದ ಆರು ವರ್ಷಗಳಿಂದ ಪಿಎಚ್‌ಡಿ ಅರ್ಹತಾ ಪರೀಕ್ಷೆ ನಡೆಸುತ್ತಾ ಬಂದಿದ್ದು, ಸುಮಾರು 80ಕ್ಕಿಂತಲೂ ಅಧಿಕ ವಿದ್ಯಾರ್ಥಿಗಳು ಪಿಎಚ್‌ಡಿಯಲ್ಲಿ ಅಧ್ಯಯನ ಮಾಡುತ್ತಿದ್ದಾರೆಂದು ಹೇಳಿದರು.

ವಿಶ್ವವಿದ್ಯಾಲಯದ ವಿದ್ಯಾರ್ಥಿಗಳಿಗೆ ಮೂಲಭೂತ ಸೌಕರ್ಯಗಳನ್ನು ಹೆಚ್ಚಿಸಲು ಕ್ರಮ ಕೈಗೊಳ್ಳಲಾಗಿದೆ. ವಿಶ್ವವಿದ್ಯಾಲಯದ ಆವರಣದಲ್ಲಿ ಪರಿಸರ ಸ್ನೇಹಿ ವಾತಾವರಣ ಕಲ್ಪಿಸಲಾಗುತ್ತಿದೆ. ಸುಸಜ್ಜಿತ ಕಲಾಭವನ, ಗ್ರಂಥಾಲಯ ನಿರ್ಮಾಣ, ಪಠ್ಯಕ್ರಮಗಳ ನಿಯಮಿತ ಪರಿಷ್ಕರಣೆ, ಆಟದ ಮೈದಾನ, ಆನ್‌ಲೈನ್ ವ್ಯವಸ್ಥೆ ಐಸಿಟಿ ಸೌಲಭ್ಯಗಳಾದ ಫೈಲ್ ಟ್ರ್ಯಾಕಿಂಗ್ ಆನ್‌ಲೈನ್, ಆನ್‌ಲೈನ್ ಅಡಿಮಿಷನ್, ರಿಜಲ್ಟ್ ಮುಂತಾದವುಗಳನ್ನು ಆರಂಭಿಸಲು ಯೋಜನೆ ರೂಪಿಸಲಾಗಿದೆ. ವಿಶ್ವವಿದ್ಯಾಲಯದ ಸಾಂಸ್ಕೃತಿಕ, ಶೈಕ್ಷಣಿಕ ಚಟುವಟಿಕೆಗಳನ್ನು ಸಶಕ್ತಗೊಳಿಸಬೇಕಾಗಿದೆ. ಗೋಟಗೋಡಿ ಜಾನಪದ ವಿಶ್ವವಿದ್ಯಾಲಯವನ್ನು ಜಾಗತಿಕ ಮಟ್ಟಕ್ಕೆ ತೆಗೆದುಕೊಂಡು ಹೋಗಲು ಹಣದ ಅವಶ್ಯಕತೆಯಿದ್ದು, ಸರಕಾರದ ನೆರವನ್ನು ವಿಶ್ವವಿದ್ಯಾಲಯ ನಿರೀಕ್ಷಿಸುತ್ತಲಿದೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಅಂತಾರಾಷ್ಟ್ರೀಯ ವೀರಗಾಸೆ ಹಿರಿಯ ಕಲಾವಿದ ಎಂ.ಆರ್.ಬಸಪ್ಪನವರಿಗೆ ಜಾನಪದ ವಿಶ್ವವಿದ್ಯಾಲಯದಿಂದ ಗೌರವ ಡಾಕ್ಟರೇಟ್ ಪ್ರಶಸ್ತಿ ನೀಡಿ ಸನ್ಮಾನಿಸಲಾಯಿತು.

ಜಾನಪದ ಸಾಹಿತ್ಯ ಅಧ್ಯಯನಕ್ಕಾಗಿ ರೂಪಾ ಮೂಡೇರ ಹಾಗೂ ಹುಸೇನ್‌ಸಾಬ ಪಿ. ಅವರಿಗೆ ಚಿನ್ನದ ಪದಕ, ಪ್ರಶಸ್ತಿ ಪ್ರದಾನ ಮಾಡಲಾಯಿತು. 2017/18, 2019/20ನೇ ಸಾಲಿನ 19 ವಿದ್ಯಾರ್ಥಿಗಳಿಗೆ ಪಿಎಚ್‌ಡಿ ಪದವಿ ಪ್ರದಾನ ಸೇರಿದಂತೆ ವಿವಿಧ ನಿಖಾಯದ ಒಟ್ಟು 789 ವಿದ್ಯಾರ್ಥಿಗಳಿಗೆ ಪದವಿ ಪ್ರದಾನ ಮಾಡಲಾಯಿತು.

ಕಾರ್ಯಕ್ರಮದಲ್ಲಿ ಕುಲಪತಿ ಪ್ರೊ.ಡಿ.ಬಿ.ನಾಯಕ, ಮೌಲ್ಯಮಾಪನ ಕುಲಸಚಿವ ಪ್ರೊ.ಎನ್. ಮಂಜುನಾಥ ಸಾಲಿ, ವಿಶ್ವವಿದ್ಯಾಲಯದ ಗೌರವ ಡಾಕ್ಟರೇಟ್ ಪದವಿ ಪುರಸ್ಕೃತ ವೀರಗಾಸೆ ಕಲಾವಿದ ಎಂ.ಆರ್.ಬಸಪ್ಪ ಸೇರಿದಂತೆ ವಿವಿಧ ನಿಖಾಯಗಳ ಡೀನ್‌ಗಳು, ಮುಖ್ಯಸ್ಥರು, ವಿದ್ಯಾರ್ಥಿಗಳು, ಸಂಶೋಧನಾ ವಿದ್ಯಾರ್ಥಿಗಳು ವಿವಿಯ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ಘಟಿಕೋತ್ಸವದಲ್ಲಿ ಪಾಲ್ಗೊಂಡಿದ್ದರು.



ಹಾವೇರಿ: ಗೊಟಗೋಡಿ ಜಾನಪದ ವಿವಿನಲ್ಲಿ ನಡೆದ 5ನೇ ಘಟಿಕೋತ್ಸವದದಲ್ಲಿ ಡಾ|ಆರ್.ಬಾಲಸುಬ್ರಹ್ಮಣ್ಯಂ ಮಾತನಾಡಿದರು.


ಬಂಕಾಪುರ: ಗೋಟಗೋಡಿ ಜಾನಪದ ವಿವಿ 5ನೇ ಘಟಿಕೋತ್ಸವದಲ್ಲಿ ಜಾನಪದ ಸಾಹಿತ್ಯ ಅಧ್ಯಯನಗೈದ ರೂಪಾ ಮೂಡೇರ ಹಾಗೂ ಹುಸೇನ್‌ಸಾಬ ಪಿ. ಅವರಿಗೆ ಚಿನ್ನದ ಪದಕ ಪ್ರದಾನ ಮಾಡಲಾಯಿತು.


ಜಾನಪದ ವಿಶ್ವವಿದ್ಯಾಲಯ ಇತರೇ ವಿವಿಗಳಿಂತ ಭಿನ್ನವಾಗಿದೆ. ನಮ್ಮ ಸಂಸ್ಕೃತಿ, ಪರಂಪರೆಯ ಮೂಲಧಾತು ಹಾಗೂ ಕೋಟ್ಯಂತರ ಜನರ ಬೆವರಿನ ಸಂಸ್ಕೃತಿಯ ಪ್ರತಿನಿಧಿಯಾಗಿರುವ ಜಾನಪದ ವಿವಿ ಬೆಳವಣಿಗೆಗೆ ಸರ್ಕಾರ ಆದ್ಯತೆ ನೀಡಬೇಕು. ಅಗತ್ಯ ಅನುದಾನ ನೀಡಿ ಈ ವಿಶ್ವವಿದ್ಯಾಲಯವನ್ನು ವಿಭಿನ್ನವಾಗಿ ಅಭಿವೃದ್ಧಿಪಡಿಸುವ ನಿಟ್ಟಿನಲ್ಲಿ ಕ್ರಿಯಾಯೋಜನೆ ಸಿದ್ಧವಾಗಬೇಕು.

● **ಡಾ|ಆರ್.ಬಾಲಸುಬ್ರಮಣ್ಯಂ,** ಸ್ವಾಮಿ ವಿವೇಕಾಂದ ಯೂಥ್ ಮೂವ್‌ಮೆಂಟ್‌ನ ಸಂಸ್ಥಾಪಕ


ಉದಯವಾಣಿ Wed, 10 March 2021
https://epaper.udayavani.com/c/58984446


Source: Udaya Vani. 10/03/2021